ವಾಸು ಹಾಗೂ ಬಿ. ಶಿವಸ್ವಾಮಿ ನಿರ್ದೇಶನದ ಸಿನಿಮಾ. ರವಿಚಂದ್ರನ್, ಸಾಯಿಕುಮಾರ್, ವಿಜಯಲಕ್ಷ್ಮಿ, ಹಾಗೂ ಶ್ರುತಿ ಈ ಚಿತ್ರದ ಮುಖ್ಯ ಪಾತ್ರಗಳಲ್ಲಿ ನಟಿಸಿದ್ದರು. ಮಹಾತ್ಮನ ಮುಖ ತೊಟ್ಟು ಸಮಾಜವಿರೋಧಿ ಚಟುವಟಿಕೆಗಳಲ್ಲಿ ತೊಡಗಿರುವ ವ್ಯಕ್ತಿಯ ಅಸಲು ಮುಖವನ್ನು ಬಯಲು ಮಾಡುವ ನಾಯಕ–ನಾಯಕಿಯ (ಇಬ್ಬರೂ ಸಿಬಿಐ ಅಧಿಕಾರಿಗಳು) ಕಥೆ ಚಿತ್ರದಲ್ಲಿತ್ತು.

ಬಿ. ಮಲ್ಲೇಶ್ ನಿರ್ದೇಶನದ 'ರೂಪಾಯಿ ರಾಜ' (1993) ಸಿನಿಮಾದಲ್ಲಿ ಗಾಂಧೀಜಿ ವೇಷಧಾರಿಯನ್ನು ವ್ಯವಸ್ಥೆಯ ಕನ್ನಡಿ ರೂಪದಲ್ಲಿ ಬಳಸಿರುವುದು ಕುತೂಹಲಕರವಾಗಿದೆ. ಅರ್ಥಶಾಸ್ತ್ರದಲ್ಲಿ ಚಿನ್ನದ ಪದಕ ಪಡೆದ ತಮ್ಮಯ್ಯ ಎನ್ನುವ ನಿರುದ್ಯೋಗಿ ಸಂದರ್ಶನವೊಂದನ್ನು ಎದುರಿಸಿ ಕೆಲಸ ಸಿಗದೆ ನಿರಾಶನಾಗುತ್ತಾನೆ. ಕಬ್ಬನ್ ಪಾರ್ಕ್‌ನಲ್ಲಿ ಡೈನೊಸಾರ್ ಪ್ರತಿಕೃತಿಯ ಎದುರು ಪ್ರತಿಮೆಯಂತೆ ನಿಂತ ಮಹಾತ್ಮನ ವೇಷಧಾರಿಯನ್ನು ನೋಡುತ್ತಾನೆ. ವೇಷಧಾರಿಯನ್ನೇ ಪ್ರತಿಮೆ ಎಂದು ಭಾವಿಸುವ ತಮ್ಮಯ್ಯ, ತನ್ನ ಪರಿಸ್ಥಿತಿಯನ್ನೂ ದೇಶದ ಅವ್ಯವಸ್ಥೆಯನ್ನೂ ತೋಡಿಕೊಳ್ಳುತ್ತಾನೆ. ತಮ್ಮಯ್ಯ ಹಿಂತಿರುಗಿ ನೋಡಿದರೆ ಗಾಂಧೀಜಿಯೇ ಇಲ್ಲ. ಗಾಂಧಿಯನ್ನು ಡೈನೋಸಾರ್ ಏನಾದರೂ ನುಂಗಿತಾ ಎಂದು ತಮ್ಮಯ್ಯ ಆಶ್ಚರ್ಯಪಡುವಷ್ಟರಲ್ಲಿ, ಪುಟಾಣಿ ರೈಲಿನ ಮೇಲೆ ಕುಳಿತು ಪಯಣಿಸುತ್ತಿರುವ ಗಾಂಧೀಜಿ ಕಾಣಿಸುತ್ತಾರೆ. ಮಕ್ಕಳ ಜೊತೆಗೆ ಗಾಂಧಿ ರೈಲಿನಲ್ಲಿ ಪಯಣಿಸುವ ಕಲ್ಪನೆಯೇ ಸೊಗಸಾಗಿದೆ. ಈ ಕಲ್ಪನೆ 'ನಿದ್ದೆ ಮಾಡೋ ದೇವರಂಥ ಗಾಂಧಿ' ಎನ್ನುವ 'ಮಾಡಿ ಮಡಿದವರು' ಚಿತ್ರದ ಬಣ್ಣನೆಗೆ ಹತ್ತಿರವಾದುದು.

ಕನ್ನಡ ಸಿನಿಮಾಗಳಲ್ಲಿನ ಗಾಂಧಿ ಬಿಂಬಗಳ ಸಾಲಿನಲ್ಲಿ 'ಒಂದೇ ಕುಲ ಒಂದೇ ದೈವ' (1971) ಚಿತ್ರದ, 'ಗಾಂಧಿ ತಾತನ ಸನ್ನಿಧಿಗೊಂದು ಬಾಲಕಿ ಬರೆದ ವಿನಂತಿ' ಗೀತೆಯನ್ನು ನೆನಪಿಸಿಕೊಳ್ಳಬೇಕು. ಸ್ವಾತಂತ್ರ್ಯದ ಆಶಯಗಳೆಲ್ಲ ವರ್ತಮಾನದಲ್ಲಿ ಗಾಳಿಗೋಪುರವಾಗಿರುವ ವಿಪರ್ಯಾಸವನ್ನು ಈ ಹಾಡು ಚಿತ್ರಿಸುತ್ತದೆ. ಹುಣಸೂರು ಕೃಷ್ಣಮೂರ್ತಿ ರಚನೆಯ ಈ ಗೀತೆಯಲ್ಲಿ, 'ನೀನು ಮತ್ತು ಚಾಚಾ ನೆಹರು ಕಟ್ಟಿದ ಈ ರಾಮರಾಜ್ಯ, ಗಾಳಿಗೆ ಎಗರೊ ಕಾಲ ಬಂತು, ಬುದ್ಧಿ ಹೇಳು ಬಾರೋ ತಾತ' ಎನ್ನುವ ಕೋರಿಕೆಯಿದೆ.

ಗಾಂಧಿಯನ್ನು ನೆನಪಿಸುವ ಮತ್ತೊಂದು ಗೀತೆ – 'ಎಲ್ಲರ ನೋವನು ಬಲ್ಲವನಾದರೆ'. ಗಾಂಧೀಜಿಯವರಿಗೆ ಪ್ರಿಯವಾದ 'ವೈಷ್ಣವ ಜನತೋ' ಗೀತೆಯನ್ನು 'ಗಾಂಧಿ ಸ್ಮೈಲ್ಸ್' ಚಿತ್ರಕ್ಕಾಗಿ ಜಯಂತ ಕಾಯ್ಕಿಣಿ ಅನುವಾದಿಸಿದ್ದಾರೆ.

'ವೈಷ್ಣವ ಜನತೊ' ಗಾಂಧಿಯವರ ನಿತ್ಯ ಪ್ರಾರ್ಥನೆಗೆ ಒದಗಿಬರುತ್ತಿದ್ದ ಹಾಡು. ಹದಿನೈದನೇ ಶತಮಾನದ ಕವಿ ನರಸೀ ಮೆಹ್ತಾ ಗುಜರಾತಿ ರಚನೆಯ ಈ ಭಜನೆಯನ್ನು ಜಯಂತರು ಕನ್ನಡದ್ದೇ ಹಾಡೆನ್ನುವಂತೆ ರೂಪಾಂತರಿಸಿದ್ದಾರೆ. 'ಮಮತೆಯಲ್ಲಿಯೆ ಮನುಜನಾಗುವ ಪಯಣವೆ ಬಾಳಿನ ಗುರಿಯಿಲ್ಲಿ' ಎನ್ನುವ ಗೀತೆಯ ಕೊನೆಯ ಚರಣ ಮಹಾತ್ಮನ ಬದುಕಿನ ವ್ಯಾಖ್ಯಾನದಂತಿದೆ. ಮನುಜನಾಗುವ ಈ ಪಯಣ ಎಲ್ಲ ಕಲೆಗಳ ಆಶಯವೂ ಹೌದು. ಇಂಥ ಪಯಣದಲ್ಲಿ ಸಿನಿಮಾ (ಕನ್ನಡ ಸಿನಿಮಾ) ಕೂಡ ತನ್ನನ್ನು ಗುರ್ತಿಸಿಕೊಂಡಿದೆ ಎನ್ನುವುದಕ್ಕೆ ಸಿಗುವ ಉದಾಹರಣೆಗಳು ಸಾಕಷ್ಟು ವೈವಿಧ್ಯವೂ ಕುತೂಹಲಕರವಾಗಿಯೂ ಇವೆ. ಆದರೆ, ಗಾಂಧಿ ಹಿಡಿದಷ್ಟೂ ವಿಸ್ತರಿಸುವ ಅಪೂರ್ವ ರೂಪಕ. ದೇಶಭಕ್ತಿ, ಸ್ವಾತಂತ್ರ್ಯದ ಚಹರೆಗಳೇ ಬದಲಾಗಿರುವ ಸಂದರ್ಭದಲ್ಲಿ ಹೊಸ ಕಾಲದ ಬಿಕ್ಕಟ್ಟುಗಳಿಗೆ ಉತ್ತರ ಕಂಡುಕೊಳ್ಳುವ ನಿಟ್ಟಿನಲ್ಲಿ ಮತ್ತೆ ಮತ್ತೆ ಗಾಂಧಿಯ ಅನುಸಂಧಾನ ಈ ಕಾಲದ ತುರ್ತು.

❀